ಶ್ರೀ ವಾಟಾಳ್ ನಾಗರಾಜ್ : ತಮ್ಮಲ್ಲಿ ಪ್ರಾಮಾಣಿಕತೆ ಇದೆ. ಆದರೆ ತಮಗೆ ಯಾರೋ ತಪ್ಪು ಮಾಹಿತಿಗಳನ್ನು ಕೊಡುತ್ತಿದ್ದಾರೆ. ಇದು ನಿಜವಾಗಿಯೂ ಬೋಗಸ್‌ಯೆಂದು ಹೇಳುತ್ತಿದ್ದೇನೆ. ಇದರಲ್ಲಿ ಏನೋ ಇದೆ. ನೀವು ಬಹಳ ಒಳ್ಳೆಯ ಮಂತ್ರಿಗಳು. ಅದರ ಬಗ್ಗೆ ನನ್ನದೇನೂ ಇಲ್ಲ.

ಶ್ರೀ ಸಿ. ಬೈರೇಗೌಡ : ಎಲ್ಲಾ ಕಡೆ ನಿವೇಶನಗಳು ಸಿಗುವುದಿಲ್ಲ.ಎಲ್ಲಿ ಮನೆ ನಿವೇಶನಗಳು ಇವೆ ಅಲ್ಲಿ ಮನೆಗಳನ್ನು ಕಟ್ಟಿಸುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಮ್ಮಲ್ಲಿ ತಪ್ಪು ಮಾಹಿತಿ ಇದೆ. ತಾವು ದಯವಿಟ್ಟು ಬೇಸರ ಮಾಡಿಕೊಳ್ಳಬೇಡಿ. ನಿವೇಶನಗಳು ಇಲ್ಲವೆನ್ನುವ ಪ್ರಶ್ನೆಯಲ್ಲ. 11 ಲಕ್ಷ ನಿವೇಶನಗಳನ್ನು ನಾವು ರಾಜ್ಯದಲ್ಲಿ ಹಂಚಿದ್ದೇವೆ. ಅದರಲ್ಲಿ ಮನೆಗಳನ್ನು ಕಟ್ಟಿರುವುದು 3 ಲಕ್ಷ ನಿವೇಶನಗಳಲ್ಲಿ ಮಾತ್ರ. ಇನ್ನು 8 ಲಕ್ಷ ನಿವೇಶನಗಳು ಹಾಗೆಯೇ ಇವೆ. ಎರಡನೆಯದಾಗಿ, ಹಣವನ್ನು ಕೊಡುತ್ತೀರಿ ಎಂದು ಬಡವರು ಗೋಡೆಗಳನ್ನು ಹಾಕಿಕೊಂಡಿದ್ದಾರೆ. ಮಳೆ ಬಂದು ಅವರ ಗೋಡೆಗಳು ಬೀಳುತ್ತಿವೆ. ಅವರಿಗೆ ನೀವು ಹಣವನ್ನು ಕೊಡಿ. ಅರ್ಹತಹವರಿಗೆ ಹಣವನ್ನು ರಿಲೀಸ್ ಮಾಡುತ್ತೇವೆಂದು ಕೊನೆಯ ಪಕ್ಷ ಅದನ್ನಾದರೂ ಹೇಳಿ. ಆ ಆಶ್ವಾಸನೆಯನ್ನು ಕೊಡುತ್ತೀರಾ?

ಶ್ರೀ ಬಿ. ಶಿವಣ್ಣ : 1 ಲಕ್ಷ ಮನೆಗಳನ್ನು ಡಾ: ಅಂಬೇಡ್ಕರ್‌ರವರ ಜನ್ಮಶತಾಬ್ದಿ ಅಂಗವಾಗಿ ಕಟ್ಟುತ್ತೇವೆ. ಬೇರೆ ಜನತಾ ಮನೆಗಳು ನಮಗೆ ಸಂಬಂಧವಿಲ್ಲ.

ಅಧ್ಯಕ್ಷರು : ನೀವು ಪ್ರಾರಂಭ ಮಾಡಿದವು ಬೇರೆ. ಇವರು ನವೆಂಬರ್‌ನಿಂದ ಮನೆಗಳನ್ನು ಕಟ್ಟುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಹಣ ಎಲ್ಲಿದೆ? ಹಣ ಬಿಡುಗಡೆಯಾಗಿಲ್ಲ. ನಿವೇಶನದ ಆಯ್ಕೆ ಆಗಿಲ್ಲ.

ಶ್ರೀ ಬಿ. ಶಿವಣ್ಣ : ನಿವೇಶನ ತೆಗೆದುಕೊಳ್ಳುವ ಸಲುವಾಗಿ 2 ಕೋಟಿ ರೂಪಾಯಿ ಹಣ ಬೇಕು. ಅದನ್ನು ಕೊಡುವುದಕ್ಕೆ ನಾವು ರೆಡಿ ಇದ್ದೇವೆ. ಆಮೇಲೆ ಮನೆ ಕಟ್ಟುವ ಸಲುವಾಗಿ ಆರ್‌ಡಿಪಿಆರ್ ಇಲಾಖೆಗೆ ವಹಿಸಿಕೊಟ್ಟಿದ್ದೇವೆ.

ಅಸಿಸ್ಟೆಂಟ್ ಕಮೀಷನರ್ ಅವರು ಲ್ಯಾಂಡ್ ಅಕ್ವಿಸಿಷನ್ ಮಾಡಿ ನಮಗೆ ಕೊಡಬೇಕು. ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಒಂದು ಲಕ್ಷ ಮನೆಗಳನ್ನು ಕಟ್ಟುವ ಪ್ರೋಗ್ರಾಮ್ ಮಾಡಿದೆ. ಆ ದುಡ್ಡು ನಮ್ಮ ಹತ್ತಿರವೇ ಇದೆ.

ಶ್ರೀ ಆರ್. ಎಲ್. ಜಾಲಪ್ಪ : ಒಂದು ಲಕ್ಷ ಮನೆಗಳನ್ನು ಕಟ್ಟಿಸದೇ ಇದ್ದರೆ ನೀವು ರಾಜೀನಾಮೆ ಕೊಡಬೇಕು.

(ಉತ್ತರ ಇಲ್ಲ)

ತೆಂಗಿನ ಮೊಟ್ಟೆಗಳು.

2412 - ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಿಂಡಸಾರಿ ಸಕ್ಕರೆ ಉದ್ಯಮಗಳು ಉರುವಲಿಗಾಗಿ ತೆಂಗಿನ ಮೊಟ್ಟೆಗಳನ್ನು ಉಪಯೋಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮೇಲ್ಕಂಡ ವಸ್ತುಗಳು ನಾರು ಉದ್ಯಮಕ್ಕೆ ಅಗತ್ಯವಿರುವ ಕಚ್ಚಾವಸ್ತುಗಳಾಗಿರುವುದರಿಂದ ಇವುಗಳನ್ನು ಇಂಧನ ರೂಪದಲ್ಲಿ ಉಪಯೋಗಿಸುವುದನ್ನು ನಿಷೇಧಿಸಲು ಸರ್ಕಾರ ಕ್ರಮ ಕೈಗೊಳ್ಳಲಿದೆಯೇ?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣ್ರದ ಕೈಗಾರಿಕಾ ರಾಜ್ಯ ಸಚಿವರು):

ಅ) ಬಂದಿದೆ.

ಆ) ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಂಡಿದೆ. ಖಂಡಸಾರಿ ಪರವಾನಿಗೆಯಲ್ಲಿ ತೆಂಗಿನ ಮೊಟ್ಟೆಗಳನ್ನು ಉರುವಲಾಗಿ ಉಪಯೋಗಿಸಬಾರದೆಂಬ ಷರತ್ತನ್ನು ಸೇರಿಸಲಾಗಿದೆ.

ಶ್ರೀ ಆರ್. ಎಲ್. ಶಿವರಾಮೇಗೌಡ : ಮಾನ್ಯ ಸಭಾಧ್ಯಕ್ಷರೇ, ಈ ಖಂಡಸಾರಿ ಸಕ್ಕರೆ ಕಂಪನಿಗಳು ತೆಂಗಿನ ಮೊಟ್ಟೆಗಳನ್ನು ಉಪಯೋಗಿಸತಕ್ಕಂಥ ವಿಚಾರದಲ್ಲಿ, ಸರ್ಕಾರದ ಪರವಾನಗಿಯಲ್ಲಿ ತೆಂಗಿನ ಮೊಟ್ಟೆಗಳನ್ನು ಉಪಯೋಗಿಸಬಾರದು ಎಂದು ಷರತ್ತನ್ನು ಸೇರಿಸಿರತಕ್ಕದ್ದು ಸ್ವಾಗತಾರ್ಹವಾದ ವಿಚಾರ. ಆದರೂ ಸಹಿತ 1977ನೇ ಇಸವಿಯಿಂದ ಡೈರೆಕ್ಟರ್ ಆಫ್ ಶುಗರ್ಸ್‌ನವರು ಒಂದು ನೋಟಿಫಿಕೇಷನ್ ಹೊರಡಿಸಿದ್ದಾರೆ. ಈ ಖಂಡಸಾರಿ ಸಕ್ಕರೆ ಫ್ಯಾಕ್ಟರಿಗಳು ಉರುವಲಾಗಿ ತೆಂಗಿನ ಮೊಟ್ಟೆಗಳನ್ನು ಉಪಯೋಗಿಸಕೂಡದು, ಬಗಾಸ್ ಎಂದು ಬರತಕ್ಕಂಥ ಕಚ್ಚಾಮಾಲನ್ನೇ ಉಪಯೋಗಿಸಿಕೊಂಡು ಆ ಕಾರ್ಖಾನೆಗಳನ್ನು ನಡೆಸಬೇಕೇ ಹೊರತು ತೆಂಗಿನ ಮೊಟ್ಟೆಗಳನ್ನು ಉಪಯೋಗಿಸಿದರೆ ತೆಂಗಿನ ಕೈಗಾರಿಕೆಗಳಿಗೆ ತೊಂದರೆಯಾಗುತ್ತದೆ. ಹಸ್ಕ್ ಕಡಿಮೆಯಾಗುತ್ತದೆ ಎಂದು ಒಂದು ನೋಟಿಫಿಕೇಷನ್ ಅನ್ನು ಹೊರಡಿಸಿದ್ದಾರೆ. 1977ರಲ್ಲಿ ಈ ನೋಟಿಫಿಕೇಷನ್ ಹೊರಡಿಸಿದ್ದರೂ ಇವತ್ತಿನವರೆಗೂ ಸಹಿತ ಅದು ಕಾರ್ಯಗತವಾಗಿಲ್ಲ. ದಿನಬೆಳಗಾದರೆ ಈ ಖಂಡಸಾರಿ ಸಕ್ಕರೆ ಕಂಪನಿಗಳವರು ತೆಂಗಿನ ಮೊಟ್ಟೆಗಳನ್ನು ಉರುವಲಾಗಿ ಉಪಯೋಗಿಸುತ್ತಿದ್ದಾರೆ. ಇದರಿಂದ ಇಡೀ ರಾಜ್ಯದಲ್ಲಿರತಕ್ಕ ತೆಂಗಿನ ನಾರಿನ ಕೈಗಾರಿಕೆಗಳು ಸ್ಥಗಿತಗೊಂಡಿವೆ. ಸುಮಾರು 176 ಇಂತಹ ಕೈಗಾರಿಕೆಗಳು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ನೆರವನ್ನು ಪಡೆದಿದ್ದು, ಇವುಗಳಲ್ಲಿ ಒಂದು ಕೈಗಾರಿಕೆ ಸಹಿತ ಹಣ ವಾಪಸ್ ಕಟ್ಟಲಿಕ್ಕೆ ಶಕ್ತಿಯಿಲ್ಲವಾಗಿದೆ. ಆದ್ದರಿಂದ ಹಸ್ಕ್ ಕೊರತೆ ಇರುವುದರಿಂದ ಈ ಖಂಡಸಾರಿ ಸಕ್ಕರೆ ಫ್ಯಾಕ್ಟರಿಗಳು ಉಪಯೋಗಿಸುವ ಈ ತೆಂಗಿನ ಮೊಟ್ಟೆಗಳನ್ನು ವಾಹನಗಳು ಏನು ಹೊತ್ತುಕೊಂಡು ಹೋಗುತ್ತದೆ. ಅವುಗಳ ಮೇಲೆ ನಿರ್ಬಂಧ ಮಾಡುವುದಕ್ಕೆ ಈ ನೋಟಿಫಿಕೇಷನ್ ಏನಿದೆ, ಅದನ್ನು ಒಂದು ಆಕ್ಟ್ ಮಾಡಿ ಪೋಲೀಸರಿಗ ಕೊಡತಕ್ಕದ್ದು ಏನಾದರೂ ಸರ್ಕಾರದ ಪರೀಶೀಲನೆಯಲ್ಲಿದೆಯೇ ಎನ್ನತಕ್ಕದ್ದನ್ನು ತಿಳಿಸಬೇಕು.

SRI NAZIR AHMED : At the time of issuing the Khandasari licence, there is a clause that in case if they use the coconut husk, we can cancel their licences, Many a time we have made a reference to the Deputy Commissioner to take appropriate action if any such case comes to our notice. We will ask our Department to examine and take appropriate action according to law.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನೂ ಒಬ್ಬ ತೆಂಗು ಬೆಳೆಗಾರ. ಸರ್ಕಾರ ಮಾಡಿದ ನೀತಿಯನ್ನು ನಾನು ಕೇಳಬೇಕಾಗಿದೆ. ನೀವು ಏನಾದರೂ ಈ ಹಸ್ಕ್‌ಗೆ ರೇಟ್ ನಿಗದಿ ಮಾಡಿದ್ದೀರಾ? ಇಲ್ಲದಿದ್ದರೆ ಯಾರಿಗಾದರೂ ಮನಾಪಲಿ ಮಾಡಿ ಅವರಿಗೇ ಕೊಡಬೇಕೆಂದು ಹೇಳಿ ಸರ್ಕಾರ ಕಾರ್ಯಕ್ರಮ ಹಾಕಿಕೊಂಡಿದೆಯೇ? ನೀವು ಹೇಳಿದ ರೇಟಿಗೆ ಅಥವಾ ರೈತರು ಕೊಂಡುಕೊಂಡ ರೇಟಿಗೆ ಮೊಟ್ಟೆಗಳನ್ನು ಕೊಡಬೇಕಾ? ಏಕೆಂದರೆ, ಈ ಕಾಂಪಿಟೇಶನ್ ರದ್ದು ಮಾಡಿಬಿಟ್ಟರೆ ಒಂದು ಸಾವಿರ ಮೊಟ್ಟೆಗಳಿಗೆ 60-75 ರೂಪಾಯಿ ಕೂಡ ಕಾಯರ್ ಬೋರ್ಡ್‌ನವರು ಕೊಡುತ್ತಿಲ್ಲ. ಅವರಿಗೇ

ರಿಸರ್ವೇಶನ್ ಮಾಡಿ ಎಂದು ಹೇಳುವುದಕ್ಕೆ ನಿಮಗೆ ರೈತರ ಮೇಲೆ ಯಾವ ಅಧಿಕಾರ ಇದೆ?

ಶ್ರೀ ನಜೀರ್ ಅಹಮದ್ : ಇದನ್ನು ನಾನು ಎಕ್ಸಾಮಿನ್ ಮಾಡುತ್ತೇನೆ.

ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಸಿಬ್ಬಂದಿಯ ಕೊರತೆ.

2414 - ಶ್ರೀ ಅಲ್ಲಮ್‌ವೀರಭದ್ರ (ಕುರುಗೋಡ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಸಾಕಷ್ಟು ಸಿಬ್ಬಂದಿಯು ಇರುತ್ತದೆಯೇ?

ಆ) ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯದ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯಗಳ ದುರಸ್ತಿ ಸಲುವಾಗಿ ನಿಧಿಯನ್ನೇನಾದರೂ ಮಂಜೂರಾತಿ ಮಾಡಲಾಗಿದೆಯೇ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಇಲ್ಲ.

ಆ) ಹೌದು.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಯಲ್ಲಿ 'ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ಸಾಕಷ್ಟು ಸಿಬ್ಬಂದಿ ಇರುತ್ತದೆಯೇ' ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಮಂತ್ರಿಗಳು ಹೇಳಿದ್ದಾರೆ ನಾನು ಕೇಳುವುದು ಇಷ್ಟೆ, ಕೆಲವು ದಿವಸಗಳ ಹಿಂದೆ ಪತ್ರಿಕೆಯಲ್ಲಿ ಇದನ್ನು ರೆಕಗ್ನೈಸ್ ಮಾಡುವುದಿಲ್ಲ ಎಂದು ಬಂದಿತ್ತು. ಯು.ಜಿ.ಸಿ.ಯವರು ಸಹ ಪತ್ರಿಕೆಯಲ್ಲಿ ಸ್ಪಷ್ಟವಾಗಿ ಹೇಳಿಕೆ ಕೊಟ್ಟು 'we will not recognise the Bellary Medical College for not having sufficient staff' ಎಂದು ಹೇಳಿದ್ದರು. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಅಧ್ಯಕ್ಷರೇ, ಇಲ್ಲಿ ಉಪನ್ಯಾಸಕರ ಹುದ್ದೆಗಳು ಖಾಲಿ ಇರತಕ್ಕದ್ದು ನಿಜ. ಬೋಧಕ ವರ್ಗದಲ್ಲಿ ಸುಮಾರು ಶೇಕಡಾ 50 ರಷ್ಟು ಜಾಗಗಳು ಖಾಲಿ ಇದ್ದುದರಿಂದ, 1982ರಲ್ಲಿ ಈ ಸೀನಿಯಾರಿಟಿ ಮಾಡುವಾಗ ಸುಪ್ರೀಂ ಕೋರ್ಟಿನಿಂದ ಸ್ಟೇ ಆಗಿ ಅಲ್ಲಿಂದ ಇದುವರೆಗೆ ಆ ಜಾಗವನ್ನು ಭರ್ತಿ ಮಾಡುವುದಕ್ಕೆ ಸರ್ಕಾರಕ್ಕೆ ಅವಕಾಶ ಆಗಿರುವುದಿಲ್ಲ. ಎರಡನೆಯದಾಗಿ, ಎರವಲು ಸೇವೆ ಕೊಟ್ಟು ಕೆಲಸ ಮಾಡುವುದಕ್ಕೆ ಸರ್ಕಾರ ವಿರ್ಪಾಡು ಮಾಡಿದೆ. ಆದರೆ ಅದಕ್ಕೂ ಕೂಡ ಜನರು ಹೋಗದೆ ಅಲ್ಲಿಗೆ ಸ್ವಲ್ಪ ಅನಾನುಕೂಲ ಆದದ್ದು ನಿಜ. ಈ ಮಧ್ಯೆ ಐ.ಎಂ.ಸಿ. ಯವರು, ನೀವು ಇದೇ ರೀತಿ ಮುಂದುವರೆಸಿದರೆ ನಾವು ಅಫಿಲಿಯೇಶನ್ ವಾಪಸ್ ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳಿದ್ದರ ಹಿನ್ನಲೆಯಲ್ಲಿ ಈಗ ಆ ಜಾಗಗಳನ್ನು ತುಂಬಲಿಕ್ಕೆ ಗುತ್ತಿಗೆ ಆಧಾರದ ಮೇಲೆ ಬೋಧಕ ವರ್ಗದವರನ್ನು ನೇಮಕಾತಿ ಮಾಡಿ ಐ.ಎಂ.ಸಿ. ನಾರ್ಮ್ಸ್ ಒಳಗಡೆ ಕೆಲಸ ಮಾಡುವುದಕ್ಕೆ ಸರ್ಕಾರ ಈಗಾಗಲೇ ಕಾರ್ಯಕ್ರಮ ಹಾಕಿಕೊಂಡಿದೆ. ಅಫಿಲಿಯೇಷನ್ ಡಿ-ರೆಕಗ್ನೈಸ್ ಆಗುವುದಕ್ಕೆ ಬಿಡುವುದಿಲ್ಲ ಎಂಬ ಮಾತನ್ನು ಈ ಸಮಯದಲ್ಲಿ ತಮಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ಎಷ್ಟು ದಿವಸದಲ್ಲಿ ಈ ಕಾರ್ಯಕ್ರಮ ಮಾಡಿಕೊಡುತ್ತೀರಿ.